ನಿಮ್ಮೊಡನೆ

# ನಿರ್ಲಕ್ಷ್ಯಕ್ಕೆ ಬಲಿಯಾದ ಮಕ್ಕಳು

ರಾಜ್ಯದಲ್ಲಿ ಇನ್ನೆಷ್ಟು ಹಾಸ್ಟೆಲ್‌ಗಳು ಈ ರೀತಿ ಮೂಲಸೌಲಭ್ಯಗಳಿಲ್ಲದೆ, ಮಕ್ಕಳ ಪಾಲಿಗೆ ನರಕಪ್ರಾಯವಾಗಿ ನಡೆಯುತ್ತಿದೆಯೋ ಗೊತ್ತಿಲ್ಲ. ಖಾಸಗಿ ಶಾಲೆಗಳ ಮೇಲೆ ಸರ್ಕಾರಕ್ಕೆ ಯಾವ ಹಿಡಿತವೂ ಇಲ್ಲ. ರಾಜ್ಯ ಸರ್ಕಾರ ತಕ್ಷಣ ಕರ್ನಾಟಕ ಶಿಕ್ಷಣ ಕಾಯ್ದೆ–೧೯೮೩ಕ್ಕೆ ತಿದ್ದುಪಡಿ ತಂದು, ಎಲ್ಲ ಶಾಲೆಗಳೂ ರಾಜ್ಯ ಮಕ್ಕಳ ಸುರಕ್ಷಾ ನೀತಿಯ ಅಡಿಯಲ್ಲಿ ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು.

ಖಾಸಗಿ ಶಾಲೆಗಳಲ್ಲಿ ಏನು ನಡೆಯುತ್ತಿದೆ ಎನ್ನುವುದು ಸರ್ಕಾರದ ಶಿಕ್ಷಣ ಇಲಾಖೆಗೆ ಗೊತ್ತಾಗುವುದು ಯಾವುದಾದರೂ ದುರಂತ ಸಂಭವಿಸಿದಾಗಲೇ. ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮತ್ತು ಪೋಷಕರ ಶೋಷಣೆ ಅವ್ಯಾಹತವಾಗಿ ನಡೆದರೂ, ಶಿಕ್ಷಣ ಇಲಾಖೆ ನಿರ್ಲಕ್ಷ್ಯ ತೋರುವುದು ಎದ್ದು ಕಾಣಿಸುತ್ತಿದೆ. ಇತ್ತೀಚೆಗೆ ತುಮಕೂರು ಜಿಲ್ಲೆಯ ಹುಳಿಯಾರಿನಲ್ಲಿ 'ಇಂಟರ್‌ನ್ಯಾಷನಲ್' ಹೆಸರಿನ ಶಾಲೆಯೊಂದರ ಹಾಸ್ಟೆಲ್‌ನಲ್ಲಿ 'ವಿಷಾಹಾರ' ಸೇವನೆಯಿಂದ ಮೂವರು ಎಳೆಯ ವಿದ್ಯಾರ್ಥಿಗಳು ಮತ್ತು ಕಾವಲುಗಾರ ಮೃತಪಟ್ಟ ಘಟನೆ ಶಿಕ್ಷಣ ಇಲಾಖೆಯ ಅದಕ್ಷ ಕಾರ್ಯವೈಖರಿಗೆ ಸ್ಪಷ್ಟ ಕನ್ನಡಿ ಹಿಡಿದಿದೆ. ಹಾಸ್ಟೆಲ್ ನಲ್ಲಿ ನೀಡಿದ ಆಹಾರವನ್ನು ಫೊರೆನ್ಸಿಕ್ ಪರೀಕ್ಷೆಗೆ ಕಳುಹಿಸಿದ್ದು, ಆ ವರದಿ ಬಂದ ಬಳಿಕ ಮಕ್ಕಳ ಸಾವಿಗೆ ಸ್ಪಷ್ಟ ಕಾರಣ ಗೊತ್ತಾಗಲಿದೆ. ದುರಂತದ ಬಳಿಕ ಹಾಸ್ಟೆಲ್‌ಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರು, 'ಆಹಾರದಲ್ಲಿ ಯಾರಾದರೂ ವಿಷ ಬೆರೆಸಿರಲೂಬಹುದು' ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ತನಿಖೆಯ ವರದಿ ಬರುವ ಮುನ್ನವೇ ಹೀಗೆ ಅನುಮಾನ ವ್ಯಕ್ತಪಡಿಸುವುದು ಸಚಿವರ ಅಜ್ಞಾನವೋ ಅಥವಾ ದುರುದ್ದೇಶವೋ ಗೊತ್ತಾಗುತ್ತಿಲ್ಲ. ಈ ಖಾಸಗಿ ಶಾಲೆ ಮಾಜಿ ಶಾಸಕರ ಒಡೆತನದ್ದು ಎನ್ನುವುದೂ ಸಚಿವರ ಈ ಅಪ್ರಬುದ್ಧ ಹೇಳಿಕೆಗೆ ಕಾರಣ ಇರಬಹುದೆ?

ದುರಂತದ ಬಳಿಕ ಶಾಲೆಗೆ ಭೇಟಿ ನೀಡಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲೆಯ ಹಾಸ್ಟೆಲ್ ಮೂರು ವರ್ಷಗಳಿಂದ ನಡೆಯುತ್ತಿದ್ದು ಅದಕ್ಕೆ ಇಲಾಖೆಯಿಂದ ಅನುಮತಿ ಪಡೆದುಕೊಂಡಿಲ್ಲ ಎಂದು ಬಹಿರಂಗಪಡಿಸಿದ್ದಾರೆ. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಯಾವ ಮೂಲಸೌಲಭ್ಯಗಳೂ ಇಲ್ಲ, ಅಡುಗೆಮನೆಯಲ್ಲಿ ನೈರ್ಮಲ್ಯವಂತೂ ಇಲ್ಲವೇ ಇಲ್ಲ ಎಂಬುದೂ ಬಹಿರಂಗವಾಗಿದೆ. ಲೈಸೆನ್ಸ್ ಪಡೆಯದೆ ನಡೆಯುತ್ತಿದ್ದ ಹಾಸ್ಟೆಲ್ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಮೂರು ವರ್ಷಗಳಲ್ಲಿ ಯಾವ ಕ್ರಮವನ್ನೂ ಏಕೆ ಕೈಗೊಂಡಿಲ್ಲ? ಶಿಕ್ಷಣ ಸಂಸ್ಥೆಯ ಮಾಲೀಕರಾದ ಮಾಜಿ ಶಾಸಕರು ಅದಕ್ಕೇನಾದರೂ ಅಡ್ಡಿಯಾಗಿದ್ದರೆ? ಸಮಾಜ ಕಲ್ಯಾಣ ಇಲಾಖೆ ಅಥವಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು? ಹಾಸ್ಟೆಲ್‌ನಲ್ಲಿ ಕಡ್ಡಾಯವಾಗಿ ಇರಬೇಕಿದ್ದ ಸಿಸಿ ಟಿವಿ ಕೆಟ್ಟು ಹೋಗಿತ್ತು ಎನ್ನುವುದೂ ಹಾಸ್ಟೆಲ್‌ಅನ್ನು ಎಷ್ಟು ಬೇಜವಾಬ್ದಾರಿಯಿಂದ ನಡೆಸುತ್ತಿದ್ದರು ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಮೂವರು ಮಕ್ಕಳು ಮತ್ತು ತನ್ನ ಇಡೀ ಕುಟುಂಬಕ್ಕೆ ಆಧಾರವಾಗಿದ್ದ ಒಬ್ಬ ಕಾವಲುಗಾರನ ಸಾವು ಜನಮಾನಸದಿಂದ ಕೆಲವೇ ಸಮಯದಲ್ಲಿ ಮರೆತುಹೋಗಬಹುದು. ಆದರೆ ಆ ಕುಟುಂಬಗಳ ಸದಸ್ಯರ ನೋವು ಅಷ್ಟು ಸುಲಭವಾಗಿ ಮಾಯುವಂತಹದ್ದಲ್ಲ. ರಾಜ್ಯದಲ್ಲಿ ಇನ್ನೆಷ್ಟು ಹಾಸ್ಟೆಲ್‌ಗಳು ಈ ರೀತಿ ಮೂಲಸೌಲಭ್ಯಗಳಿಲ್ಲದೆ, ಮಕ್ಕಳ ಪಾಲಿಗೆ ನರಕಪ್ರಾಯವಾಗಿ ನಡೆಯುತ್ತಿದೆಯೋ ಗೊತ್ತಿಲ್ಲ. ಖಾಸಗಿ ಶಾಲೆಗಳ ಮೇಲೆ ಸರ್ಕಾರಕ್ಕೆ ಯಾವ ಹಿಡಿತವೂ ಇಲ್ಲ ಎನ್ನುವುದು ಹಿಂದೆಯೂ ಹಲವು ಪ್ರಕರಣಗಳಲ್ಲಿ ಬೆಳಕಿಗೆ ಬಂದಿದೆ. ರಾಜ್ಯ ಸರ್ಕಾರ ತಕ್ಷಣ ಕರ್ನಾಟಕ ಶಿಕ್ಷಣ ಕಾಯ್ದೆ–1983ಕ್ಕೆ ತಿದ್ದುಪಡಿ ತಂದು, ಎಲ್ಲ ಶಾಲೆಗಳೂ ರಾಜ್ಯ ಮಕ್ಕಳ ಸುರಕ್ಷಾ ನೀತಿಯ ಅಡಿಯಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಮಕ್ಕಳ ಸುರಕ್ಷಾ ಕ್ರಮಗಳನ್ನು ಎಲ್ಲ ಶಾಲೆಗಳೂ ಕಡ್ಡಾಯವಾಗಿ ಅನುಸರಿಸುವಂತೆ ಮಾಡಬೇಕು. ಶಿಕ್ಷಣ ಇಲಾಖೆಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸುವಂತೆಯೂ, ಹಾಗೆ ಪರಿಶೀಲನೆ ನಡೆಸದ ಅಧಿಕಾರಿಗಳ ಕರ್ತವ್ಯಚ್ಯುತಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆಯೂ ಸರ್ಕಾರ ಎಚ್ಚರ ವಹಿಸಬೇಕು.

ನಮ್ಮ ಆಸ್ಪತ್ರೆಗಳೂ, ವೈದ್ಯರೂ ಹೃದಯಹೀನರಂತೆ ವರ್ತಿಸಿದ್ದಾರೆ ಎನ್ನುವುದು ಈ ಪ್ರಕರಣದಲ್ಲಿ ಗೊತ್ತಾದ ಇನ್ನೊಂದು ಸತ್ಯ. ಆಹಾರ ಸೇವಿಸಿ ಅಸ್ವಸ್ಥರಾದ ಮಕ್ಕಳನ್ನು ಸೇರಿಸಿಕೊಂಡು ಚಿಕಿತ್ಸೆ ನೀಡಲು ತುಮಕೂರಿನ ಮೂರು ಆಸ್ಪತ್ರೆಗಳು ನಿರಾಕರಿಸಿದ್ದು ಏನನ್ನು ಸೂಚಿಸುತ್ತದೆ? ಅಲ್ಲಿಂದ ಬಳಿಕ ಜಿಲ್ಲಾ ಆಸ್ಪತ್ರೆಗೆ ಮಕ್ಕಳನ್ನು ಕರೆದೊಯ್ದಾಗ ಸುಮಾರು ನಾಲ್ಕು ತಾಸುಗಳೇ ಉರುಳಿದ್ದವು. ಮಕ್ಕಳಿಗೆ ಸಕಾಲದಲ್ಲಿ ಚಿಕಿತ್ಸೆ ಸಿಕ್ಕಿದ್ದರೆ ಬಹುಶಃ ಅಮೂಲ್ಯ ಪ್ರಾಣಗಳು ಉಳಿಯುತ್ತಿದ್ದವು. ಯಾವುದೇ ಅಪಘಾತಕ್ಕೆ ಒಳಗಾದಾಗ ಅಥವಾ ತುರ್ತು ಸಂದರ್ಭಗಳಲ್ಲಿ ರೋಗಿಗೆ ತಕ್ಷಣ ಚಿಕಿತ್ಸೆ ಒದಗಿಸುವುದರ ಮಹತ್ವದ ಬಗ್ಗೆ ನಮ್ಮ ವೈದ್ಯರಿಗೂ, ಸಾರ್ವಜನಿಕರಿಗೂ ತಿಳುವಳಿಕೆ ನೀಡಬೇಕಾದ ಅಗತ್ಯವಿದೆ.

■ ಬಿ.ಎಂ.ಹನೀಫ್

